ಸ್ವೀಕೃತವಾದ ಕೂಡಲೇ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುತ್ತದೆ.

ಅದೇ ರೀತಿ ಖಾಲಿಯಿರುವ 300 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಗಿದ್ದು, ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಖಾಲಿ ಇರುವ ಹಿರಿಯ ಪಶುವೈದ್ಯಕೀಯ ಪರೀಕ್ಷರ ಹುದ್ದೆಗಳನ್ನು ಪಶುವೈದ್ಯಕೀಯ ಪರೀಕ್ಷಕರ ಮುಂಬಡ್ತಿಯಿಂದ ಭರ್ತಿ ಮಾಡಲಾಗುವುದು. ಖಾಲಿ ಇರುವ ಎರಡು ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಲ್ಲಿ ಒಂದನ್ನು ದಿನಾಂಕ:17–02–2009ರಲ್ಲಿ ಭರ್ತಿ ಮಾಡಿದೆ. ಖಾಲಿ ಇರುವ ಗ್ರೂಪ್–ಡಿ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಲಾಗುವುದು.

ಸಂಖ್ಯೆ:ಪಸಂಮೀ 129 ಪಸಸೇ 2009 **(ರೇವೂನಾಯಕ್ ಬೇಮಗಿ)**
ಪಶುಸಂಗೋಪನಾ ಸಚಿವರು.

ಕರ್ನಾಟಕ ವಿಧಾನ ಸಭೆ

177 ಶ್ರೀ ಸುರೇಶ್‌ಬಾಬು.ಸಿ.ಬಿ (ಚಿಕ್ಕನಾಯಕನಹಳ್ಳಿ)
ಇಂಧನ ಸಚಿವರು.

*****

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು, ಕಂದೀಕೆರೆ ಹೋಬಳಿ ಕಾತ್ರಿಕೆಹಾಳ್ ಗ್ರಾಮದಲ್ಲಿ ನೂತನವಾಗಿ ಉಪ ವಿದ್ಯುತ್ ಸ್ಥಾವರ ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆಯೇ;

ಈ ಯೋಜನೆಗೆ ಅನುಮೋದನೆ ನೀಡಲಾಗಿದೆ.

ಆ) ಮಂಜೂರಾದಂದಿನಿಂದ ಇಲ್ಲಿಯವರೆಗೆ ಕಾಮಗಾರಿ ಪ್ರಾರಂಭಿಸಲು ಯಾವಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಇ) ಕಾಮಗಾರಿ ಪ್ರಾರಂಭಿಸಲು ವಿಳಂಬವಾಗುತ್ತಿರುವುದೇಕೆ ಮತ್ತು ಎಂದಿನಿಂದ ಪ್ರಾರಂಭಿಸಲಾಗುವುದು?

ಆ) ಮತ್ತು ಇ)

830.31 ಲಕ್ಷ ರೂ.ಗೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಈ ಉದ್ದೇಶಿತ ಉಪ ಕೇಂದ್ರದ ನಿರ್ಮಾಣಕ್ಕೆ 2 ಎಕರೆ 20 ಗುಂಟೆ ಸರ್ಕಾರಿ

ಜಮೀನನ್ನು ದಿನಾಂಕ 27.11.2006 ರಂದು ಸ್ವಾಧೀನಪಡಿಸಿಕೊಳ್ಳಲಾಗಿದೆ. ಕಾಮಗಾರಿಗಳನ್ನು 200–10ರ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಉದ್ದೇಶಿಸಿದೆ.

ಸಂಖ್ಯೆ: ಇಎನ್ 16 ಪಿಪಿಎಂ 2009 (ಕೆ.ಎಸ್.ಈಶ್ವರಪ್ಪ)
ಇಂಧನ ಸಚಿವರು.

ಕರ್ನಾಟಕ ವಿಧಾನ ಸಭೆ

178 ಶ್ರೀ ಸಿ.ಬಿ.ಸುರೇಶ್ ಬಾಬು (ಚಿಕ್ಕನಾಯಕನಹಳ್ಳಿ)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು

01. ಚಿಕ್ಕನಾಯಕನಹಳ್ಳಿ ತಾಲ್ಲೂಕು, ಶ್ರೀ ಗ್ರಾಮಾಂತರ ವಿದ್ಯಾಪೀಠ ಶಿಕ್ಷಣ ಸಂಸ್ಥೆ, ಹಂದನಕೆರೆಯ ಆಡಳಿತ ಮಂಡಳಿಗೂ ಹಿಂದಿ ಶಿಕ್ಷಕಿ ಇವರುಗಳಿಗೆ ವಿವಾದವಿರುವುದು ಹಾಗೂ ವಿವಾದವು ನ್ಯಾಯಾಲಯದ ಮೆಟ್ಟಿಲೇರಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ;

ಹೌದು

02. ಈ ವಿದ್ಯಾಸಂಸ್ಥೆಯವರು, ಹಿಂದಿ ಸಹ ಶಿಕ್ಷಕರು ಹುದ್ದೆಗೆ ಬೇರೆ ಒಬ್ಬರನ್ನು ನೇಮಕ ಮಾಡಿಕೊಳ್ಳಲು, ಅನುಮೋದನೆ ಪಡೆಯಲು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದಾರೆಯೇ; ಸಲ್ಲಿಸಿದ್ದಲ್ಲಿ, ಅನುಮೋದನೆ ನೀಡಲಾಗಿದೆಯೇ;

ಶ್ರೀಮತಿ ಕೆ.ಎಲ್.ಪುಷ್ಪಾವತಿ ಬಿನ್ ಲಿಂಗರಾಜಪ್ಪ–ಹಿಂದಿ ಸಹ ಶಿಕ್ಷಕರು ಇವರನ್ನು ನಿಯಾಮಾನುಸಾರ ನೇಮಕಾತಿ ಮಾಡಿಕೊಂಡು ಪ್ರಸ್ತಾವನೆ ಸಲ್ಲಿಸಿ ಇಲಾಖೆಯಿಂದ ಅನುಮೋದನೆ ಪಡೆದಿರುತ್ತಾರೆ.

03. ವಿವಾದವು ನ್ಯಾಯಾಲಯದಲ್ಲಿರುವುದರಿಂದ, ಇಲಾಖೆಯಿಂದ ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ (ಮಾಹಿತಿ ನೀಡುವುದು).

ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುವ ಅಭ್ಯರ್ಥಿಯು ಸಾಮಾನ್ಯ ವರ್ಗದ ಅಭ್ಯರ್ಥಿಯಾಗಿದ್ದು, ಇವರ ನೇಮಕಾತಿ ಅನುಮೋದಿಸಲು ನಿಯಮಗಳಲ್ಲಿ ಅವಕಾಶ ಇಲ್ಲದೇ ಇರುವ ಬಗ್ಗೆ ರಿಟ್ ಅರ್ಜಿ ಸಂಖ್ಯೆ:5545/2006ಕ್ಕೆ ಸಂಬಂಧಿಸಿದಂತೆ, ಉಚ್ಚ ನ್ಯಾಯಾಲಯಕ್ಕೆ ಕಂಡಿಕೆವಾರು ಉತ್ತರ ಹಾಗೂ ಕರಡು ಆಕ್ಷೇಪಣಾ ಹೇಳಿಕೆಯನ್ನು ಇಲಾಖೆಯಿಂದ ಸಲ್ಲಿಸಲಾಗಿದೆ. ಈ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.